# ಸಹೃದಯರ ಸ್ಪಂದನ

## ಕೆವಿಎನ್: ಮತ್ತೆ ಮತ್ತೆ ಓದಬೇಕಾದ ಲೇಖಕ

ನವೆಂಬರ್ ತಿಂಗಳ 'ಮಯೂರ'ದಲ್ಲಿನ ಕೆ.ವಿ. ನಾರಾಯಣ (ಸಂ: ವಿಕ್ರಮ ವಿಸಾಜಿ) ಅವರ ಸಂದರ್ಶನ ಓದಿದೆ. ತುಂಬಾ ಚೆನ್ನಾಗಿದೆ. ಅವರು ಎತ್ತಿರುವ ಕೆಲವು ಪ್ರಶ್ನೆಗಳು ಮೌಲಿಕವಾದವು. 'ಯಾವುದೇ ಸ್ಥಿತಿಯು ಸಂವಾದ ರಹಿತವಾಗಬೇಕಾಗಿಲ್ಲ' ಎನ್ನುವುದು ಅತ್ಯಂತ ಮುಖ್ಯ. ಕೆವಿಎನ್ ಯಾವಾಗಲೂ ತೀರ್ಮಾನಗಳನ್ನು ಕೊಡುವುದಿಲ್ಲ. ಅದು ಅವರ ಕ್ರಮವೂ ಅಲ್ಲ. ಆದ್ದರಿಂದಲೇ ಮತ್ತೆ ಮತ್ತೆ ಅವರ ಲೇಖನಗಳು ಮುಖ್ಯವಾಗುತ್ತವೆ. ಅವರ ಸಂದರ್ಶನದಲ್ಲಿ ಬಂದ, 'ಪಂಪನ ದೇಸಿ' ಲೇಖನವೂ ಹಾಗೆಯೇ. ಇವತ್ತೂ ಅದು ಮುಖ್ಯ ಎಂದು ವೈಯಕ್ತಿಕವಾಗಿ ನನಗೆ ಅನಿಸುತ್ತದೆ. ಪಂಪನನ್ನು ನೋಡುವ ಒಂದು ಬಗೆಯನ್ನು ಮುಳಿಯರು ಹೇಳಿದರು. ಮತ್ತೊಂದು ಬಗೆಯನ್ನು ಕೆವಿಎನ್ ಹೇಳಿದ್ದಾರೆ. ವಿಮರ್ಶೆಯು ವಿಜೃಂಭಿಸಿದರೆ ಹೆಚ್ಚು ಉಪಯೋಗವಾಗಲಾರದು ಎನ್ನುವ ಅವರ ಮಾತೂ ನಿಜ.




'ಪ್ರಜಾವಾಣಿ'ಯಲ್ಲಿ ಅಂಕಣ ಬರೆಯುತ್ತಿದ್ದಾಗ, ಪುಸ್ತಕ ವಿಮರ್ಶೆ ಮಾಡುತ್ತಿದ್ದಾಗಲೂ ಅವರೊಬ್ಬ ಭಿನ್ನ ಬಗೆಯ ಲೇಖಕ ಎಂದು ನನಗನ್ನಿಸಿದೆ. ಅವರ ಜೊತೆಗೆ ಅನೇಕ ಸನ್ನಿವೇಶದಲ್ಲಿ ಮಾತಾಡಿದ್ದೇನೆ. ಅವರು ಕೆಲವು ವಿಚಾರಗಳನ್ನು ಹೇಳಿ, ನಂತರ ಹೇಳುತ್ತಾರೆ: 'ಈ ಬಗ್ಗೆ ಯೋಚನೆ ಮಾಡಿ'. ಅವರ ಮಾತು ಯೋಚನೆ ಮಾಡುವಂತೆ ಮಾಡುವುದೂ ಹೌದು. ಕೆವಿಎನ್‌ರ 'ತೊಂಡುಮೇವು' ಬರಹದ ಸಂಪುಟಗಳು ನಮ್ಮ ಮನೆಯಲ್ಲಿ ಸದಾ ಇರಬೇಕಾದ ಸಂಪುಟಗಳು. 'ತೊಂಡುಮೇವು' ಕೃತಿಗಳಲ್ಲಿನ ಲೇಖನಗಳ ಬಗ್ಗೆ ಕನ್ನಡಿಗರು ಯೋಚನೆ ಮಾಡಬೇಕು.

ಸಂದರ್ಶನದಲ್ಲಿ ಕೆವಿಎನ್ ಕೆಲವು ಪ್ರಮುಖವಾದ ಸಂಗತಿಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಸಾಧ್ಯ. ಅವರು ಲೇಖಕರ ಹೆಸರು ತೆಗೆದು ಹಾಕಬೇಕು ಎಂದು ಹೇಳುತ್ತಾರೆ. ಅದರಿಂದ ಅವರ ವಾದವು ಕೃತಿಯ ಒಳಗಿನ ಪರಿಶೀಲನೆಗೆ ಬೇಕಾದ ಪರಿಕರವನ್ನು ಕವಿತೆಯೇ ಸೃಷ್ಟಿ ಮಾಡಿಕೊಳ್ಳುತ್ತದೆ ಎಂದು ಹೇಳಿದ ಹಾಗೆ ಆಗುತ್ತದೆ. ನಮಗೆ ಕೃತಿಯು ಮಾತ್ರವೇ ಕೇಂದ್ರ ಆಗಬಾರದು ಎನ್ನುವುದು ನನ್ನ ತಕರಾರು. ಮಾರ್ಕ್ಸ್‌ವಾದದಲ್ಲಿ ಅವರು ಒಂದು ದಾರಿಯಲ್ಲಿ ಹೋಗುತ್ತಾರೆ. ಅದು ಒಂದು ದಾರಿಯಾದರೆ, ಮತ್ತೊಂದು ದಾರಿಯೂ ಇದೆ. ಕೃತಿಯನ್ನು ಓದುವುದು ಅಂದರೆ ಒಬ್ಬ ಲೇಖಕನ ಸಂವೇದನೆ ಮತ್ತು ಅದರ ರಚನೆಯನ್ನು ಅರ್ಥ ಮಾಡಿಕೊಳ್ಳುವುದು. ಕೆವಿಎನ್ ಅವರಿಗೆ ಗೊತ್ತಿರುವಂತೆ ಇದು ರೇಮಾಂಡ್ ವಿಲಿಯಂಸ್, ಫ್ರಾಯ್ಡ್ ಮುಂತಾದವರು ಹೇಳಿದ ಮಾದರಿ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳು ನಮ್ಮ ಬರಹಗಳನ್ನು ನಿರ್ದೇಶಿಸುತ್ತವೆ. ಅದನ್ನು ಲೇಖಕನ ಆಲೋಚನೆಯ ವಿನ್ಯಾಸ ಎಂದು ವಿಲಿಯಂಸ್ ಕರೆಯುತ್ತಾನೆ. ಲೇಖಕನ ಆಲೋಚನೆಯ ಕ್ರಮ ಎಂದರೂ ಸರಿಯಾಗುತ್ತದೆ.

ಕೆವಿಎನ್ ಅವರ ವಿಮರ್ಶೆಯನ್ನು ಮತ್ತು ಇತರ ಬರಹಗಳನ್ನು ಓದಲು ನನಗೆ ಅವರ ಲೇಖನಗಳು ಮಾತ್ರವೇ ಸಾಕಾಗುವುದಿಲ್ಲ. ಅವರು ಬರೆಯಲು ಶುರು ಮಾಡಿದ ಕಾಲದಲ್ಲಿ ಯಾವ ಸಾಂಸ್ಕೃತಿಕ ಸನ್ನಿವೇಶ ಇತ್ತು ಎನ್ನುವುದೂ ಅಷ್ಟೇ ಮುಖ್ಯ. ಒಂದು ನಿರ್ದಿಷ್ಟ ಕಾಲದ ಸಾಂಸ್ಕೃತಿಕ ಸನ್ನಿವೇಶಗಳು ಹೇಗೆ ಮುಖ್ಯವಾಗುತ್ತವೆ ಎನ್ನುವುದಕ್ಕೆ ಅವರ ಬರಹವೇ ಸಾಕ್ಷಿಯನ್ನು ಹೇಳುತ್ತದೆ. ಅವರ ಬರಹವೇ ನಮಗೆ ಒಂದು ಸಾಂಸ್ಕೃತಿಕ ಚರಿತ್ರೆಯನ್ನು ಹೇಳುತ್ತದೆ. ಕೃತಿ ಮತ್ತು ಕೃತಿಯು ರೂಪು ತಳೆದ ಸನ್ನಿವೇಶ ಎರಡೂ